

ಎಡದಿಂದ ಬಲಕ್ಕೆ:

1. ವಲಸೆ ಬಂದವರ ಮುಖದಲ್ಲಿ ಎಂಥ ಸಂತಸ ನೋಡಿ 3
3. ಕಣ್ಣೀರು ಕಂಡರೇ ಕರಗಿಹೋಗುತ್ತಾನೆ, ದಯಾಳು 3
4. ಹೊಸ ರೀತಿಯ ಸಾಧನ, ತುಂಬ ಚೂಪು 3
6. ಮಳೆಯ ಜೊತೆಜೊತೆಗೇ ಈ ಬಗೆಯ ಸುವಾಸನೆಯೇ? 4
7. ಪೊರಕೆಯ ಬಳಕೆಯೇ ತಿಳಿಯದವ ಖಂಡಿತ ನಮ್ಮವನಲ್ಲ 4
9. ನೋಡಿ,ನೋಡಿ. ಆಕೆಯದು ಎಷ್ಟು ಉತ್ತಮ ವರ್ತನೆ, ಮಾತು 4
11. ಪ್ರಜಾವಾಣಿಯ ಜೊತೆಗೆ ಪ್ರತಿ ದಿನವೂ ಒಂದು ಪೂರಕ ಪತ್ರಿಕೆ 4
15. ವ್ಯಾಪಾರಕ್ಕೆ ತಕ್ಕದ್ದಲ್ಲ ಎಂಬುದು ಸುಮ್ಮನೇ ಹರಡಿರುವ ಮಾತು 3
16. ಈ ವ್ಯಾಜ್ಯವನ್ನು ನಿವಾರಿಸಲು ಸೇವಕಿಯೇ ಸಾಕು 3
17. ಹೊನ್ನನ್ನೆಲ್ಲ ಅಪಹರಣ ಮಾಡುವ ಯುಕ್ತಿ ರೂಪಿಸಿದನೇ? 3

ಮೇಲಿಂದ ಕೆಳಕ್ಕೆ:

1. ವರ್ಣಿಸುವುದು ಮುಗಿದ ನಂತರ ಎಲ್ಲರಿಗೂ ಊಟ 3
2. ಸಾಹಸ ಮಾಡಲು ಬಂದವರ ಸಂಖ್ಯೆ ಹತ್ತು ನೂರು 3
3. ಮುದುಕನಾದರೂ ಆತ ಭಾರೀ ಕಿಲಾಡಿ 3
5. ತಾತ್ಪರ್ಯ ಇಷ್ಟೇ, ಅಲ್ಲಿಎಲ್ಲಕ್ಕೂ ಅಭಾವ 3
6. ತಪ್ಪನ್ನೆಸಗಿದರೆ ಬೀಳಲೇಬೇಕು ತಾನೇ? 3
8. ಏಣಿಯನ್ನು ಕ್ಷಣದಲ್ಲೇ ಕಣ್ಮರೆಯಾಗಿಸಿದ್ದು ಎಂಥ ಮಾಯೆ! 3
10. ತುಂಬ ನೈಪುಣ್ಯದ ಕೆಲಸ ; ಅದಕ್ಕೇ ಇಷ್ಟು ನಯ 3
12. ನೀರಜ ಅರಳಬೇಕೆಂದರೆ ರಾತ್ರಿಯಾಗಬೇಕು ತಾನೇ? 3
13. ಸದಾ ಹರಕೆ ಹೊರುವುದೇ ಆತನ ವಿಶೇಷ ಗುರುತು 3
14. ಅಂಜೂರವನ್ನೇ ಅಷ್ಟಿಷ್ಟು ತಿಂದರೆ ಮುಪ್ಪಿಲ್ಲದಾಗುವುದೇ? 3

---

## 08-08-2019 ಉತ್ತರಗಳು

ಎಡದಿಂದ ಬಲಕ್ಕೆ:

1. ಸಂಕಲನ 3. ಕವಚ 4. ಮಹತ್ವ 6. ಮತದಾರ 7. ರಸಾತಲ 9. ತಪೋವನ 12. ಬಿಳಿಕಾಗೆ 14. ಕಲೀಮಾ (=ಮಾಲೀಕ ಹಿಂದುಮುಂದು) 15. ನಾಸ್ತಿಕ 16. ಸಹವಾಸಿ

ಮೇಲಿಂದ ಕೆಳಕ್ಕೆ:

1. ಸಂಚಕಾರ 2. ನಮಸ್ಕಾರ 3. ಕಪೋತ 5. ತ್ವರಿತ 6. ಮಹೋನ್ನತ 8. ಲಗುಬಗೆ 10. ಪೋಷಕ 11. ನವಮಾಸ 12. ಬಿಕನಾಸಿ 13. ಕಾನಕ

ಪ್ರಶ್ನಾಂಕಣ

# ಸೂರ್ಯನ ಒಂಟಿತನ: ಏನು ಕಾರಣ?

ಸೂರ್ಯ (ಚಿತ್ರ 1). ಅದು ಹತ್ತಾರು ಸಾವಿರ ಕೋಟಿ ನಕ್ಷತ್ರಗಳಿರುವ 'ಕ್ಷೀರಪಥ'ದ ಒಂದು ಸಾಧಾರಣ ತಾರೆ. ವಿಶ್ವದ ಏಕೈಕ ಜೀವಧಾರಕ ಗ್ರಹವಾದ ಭೂಮಿಯನ್ನು ಒಳಗೊಂಡ, ಇತರ ಹೇರಳ ಕಾಯಗಳ 'ಸೌರವ್ಯೂಹ'ವನ್ನೇ ಪಡೆದಿರುವ ವಿಶ್ವ ವಿಶಿಷ್ಟ ನಕ್ಷತ್ರ ಕೂಡ.

ಆದರೆ ಅಂಥ ಅನನ್ಯ ಹಿರಿಮೆ ಇದ್ದರೂ ನಮ್ಮ ಸೂರ್ಯ ಒಂದು ಒಂಟಿ ನಕ್ಷತ್ರ. ಹಾಗೆಂದರೆ, ಒಡಹುಟ್ಟಿದವರು ಯಾರೂ ಜೊತೆಗಿಲ್ಲದ, ಸನಿಹದಲ್ಲೂ ಇಲ್ಲದ ಏಕಾಂಗಿ ನಕ್ಷತ್ರ. ಸಹಜಾತರಿರಲಿ, ಸೂರ್ಯನಿಗೆ ನಿಕಟವಾಗಿರುವ ಅನ್ಯ ನಕ್ಷತ್ರಗಳೂ ತುಂಬ ವಿರಳ. ಎಷ್ಟೆಂದರೆ, ನಮ್ಮ ಸೂರ್ಯನ ಸುತ್ತ ಹತ್ತು ಜ್ಯೋತಿರ್ವರ್ಷ ದೂರದೊಳಗಿರುವ ತಾರೆಗಳು ಕೇವಲ 11, ಅಷ್ಟೆ!

ಹಾಗೆಂದು ಹುಟ್ಟಿದಾಗಿನಿಂದಲೂ ಸೂರ್ಯನೇನೂ ಒಂಟಿಯಾಗಿರಲಿಲ್ಲ (ಚಿತ್ರ 2). ಈಗ್ಗೆ ಸುಮಾರು 500 ಕೋಟಿ ವರ್ಷಗಳ ಹಿಂದೆ ನಮ್ಮ ಸೂರ್ಯನೂ ಎಲ್ಲ ತಾರೆಗಳಂತೆಯೇ ಬಹು ಸಂಖ್ಯೆಯ ಸಹಜಾತರೊಡನೆಯೇ ಮೈದಳೆಯಿತು (ಚಿತ್ರ 3). ವಾಸ್ತವವಾಗಿ ಸೂರ್ಯ ಜನಿಸಿದಾಗ ಅದರ ಜೊತೆಗೇ ಸುಮಾರು 1500 ಕ್ಕೂ ಹೆಚ್ಚು ಸಂಖ್ಯೆಯ ವಿಧ ವಿಧ ದ್ರವ್ಯರಾಶಿ ಮತ್ತು ಗಾತ್ರಗಳ ತಾರೆಗಳೂ ಜನ್ಮ ತಳೆದುವು. ಆ ಪೈಕಿ ಸೂರ್ಯನ ಸುತ್ತ 10 ಜ್ಯೋತಿರ್ವರ್ಷ ದೂರದೊಳಗೆ ಕನಿಷ್ಠ 1000 ತಾರೆಗಳು ಹರಡಿದ್ದುವು. ಆದರೆ ಅವುಗಳಲ್ಲೊಂದೂ ಈಗ ಸೂರ್ಯನ ಜೊತೆಗಿಲ್ಲ; ಹತ್ತಿರದಲ್ಲೂ ಇಲ್ಲ.

ಹಾಗಾಗಲು ಸೂರ್ಯನೊಡನೆ ಜನಿಸಿದ ಬೇರೊಂದು ತಾರೆಯೇ ಕಾರಣ. ಸೂರ್ಯ ಮತ್ತು ಅದರ ಎಲ್ಲ ಸೋದರರು ಜನಿಸಿದ ಸುಮಾರು ಎರಡು ದಶಲಕ್ಷ ವರ್ಷಗಳ ವೇಳೆಗೆ ಅದೇ ಕುಟುಂಬದಲ್ಲಿದ್ದ ಮಹಾನ್ ದ್ರವ್ಯರಾಶಿಯ, ಅತ್ಯಂತ ಬೃಹತ್ ತಾರೆಯೊಂದು ಪ್ರಳಯ ರೂಪದ ಸ್ಫೋಟದೊಡನೆ ತನ್ನ ಬದುಕಿನ ಅಂತ್ಯ ಕಂಡಿತ್ತು. ಆ ಮಹಾ ಸ್ಫೋಟದ ಅಪಾರ ಶಕ್ತಿ ಸೂರ್ಯ ಮತ್ತದರ ಸೋದರರನ್ನೆಲ್ಲ ಒಟ್ಟಾಗಿ ಹಿಡಿದಿಟ್ಟಿದ್ದ ಗುರುತ್ವದ ಸೆಳೆತವನ್ನು ಕ್ಷೀಣಗೊಳಿಸಿತು; ಆ ಸಮೂಹದ ಎಲ್ಲ ತಾರೆಗಳನ್ನೂ ಸಿಕ್ಕತ್ತ ಚದುರುವಂತೆ ಮಾಡಿತು. ತತ್ಪರಿಣಾಮವಾಗಿ ಸುಮಾರು ಅರ್ಧಕೋಟಿ ವರ್ಷಗಳಲ್ಲಿ ಸೂರ್ಯನೂ ತನ್ನ ಜನ್ಮ ನೆಲೆಯಿಂದ ದೂರ ಬಂದು, ಎಲ್ಲ ಸಹಜಾತರ ಸಾಂಗತ್ಯವನ್ನೂ ಕಳೆದುಕೊಂಡು ಒಂಟಿಯಾಯಿತು.




ಆದರೇನು? ಅದೇ ಸ್ಫೋಟ ಶಕ್ತಿಯೇ ಆ ಕಾಲದಲ್ಲಿ ಆಗಿನ ಸೂರ್ಯನ ಸುತ್ತ ಹರಡಿದ್ದ ವಿರಳ ದ್ರವ್ಯವನ್ನೆಲ್ಲ ದೂರಕ್ಕೆ ತಳ್ಳಿ ಹಾಕಿತು. ಸೂರ್ಯನ ಸುತ್ತ ದಟ್ಟ ಮೋಡದಂತೆ ಉಳಿದ ಸಾಂದ್ರ ದ್ರವ್ಯರಾಶಿ ಅಲ್ಲಲ್ಲಿ ಒಟ್ಟುಗೂಡಿ ಈಗಿನ ಸೌರವ್ಯೂಹದ ಎಲ್ಲ ಕಾಯಗಳೂ ಮೈದಳೆದುವು. ಹಾಗೆಂದರೆ, ನಮ್ಮ ಸೂರ್ಯನ ಒಂಟಿತನಕ್ಕೆ ಕಾರಣವಾದ ವಿದ್ಯಮಾನವೇ ಭೂಮಿಯೂ ಸೇರಿದಂತೆ ಇಡೀ ಸೌರವ್ಯೂಹದ ಅವತರಣಕ್ಕೆ ದಾರಿಮಾಡಿತು ಎಂಬುದು ಸ್ಪಷ್ಟ ತಾನೇ? ಎಂಥ ಯೋಗಾಯೋಗ!

■ ಎನ್. ವಾಸುದೇವ್